ಕೆಲವು ಕಡೆ ಕೊಡುವುದಿಲ್ಲ. ಅವರಿಗೆ ಮಿನಿಮಮ್ ಸ್ಯಾಲರಿಯನ್ನು ಫಿಕ್ಸ್ ಮಾಡಿ, ಮತ್ತೆ ಬೇಕಾದರೆ ಏನಾದರೂ ವ್ಯವಸ್ಥೆಯನ್ನು ಮಾಡುವುದು ಒಳ್ಳೆಯದು.

ಡಾ॥ ಹೆಚ್.ಡಿ. ಲಮಾಣಿ:– ಈ ಸಮಸ್ಯೆ ಪ್ರತ್ಯೇಕವಾದಂತಹ ಸಮಸ್ಯೆಯಾಗಿದೆ. ಏಕೆಂದರೆ ಜಿಲ್ಲಾಪರಿಷತ್ತಿನವರು ಅಲ್ಲಿರುವಂತಹ ಸ್ಕೂಲ್ ಕಮಿಟಿಯವರಿಗೆ ಅಧಿಕಾರವನ್ನು ಕೊಟ್ಟಿದ್ದು, ನಾವು ಮಾಧ್ಯಮಿಕ ಶಾಲೆಗಳನ್ನು ಪ್ರಾರಂಭ ಮಾಡುತ್ತೇವೆ. ಆಗ ಅಧ್ಯಾಪಕರನ್ನು ಕೊಡಲಿಕ್ಕೆ ಆಗಲಿಲ್ಲ, ಈ ಒಂದು ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳಿಗೆ ತೊಂದರೆ ಆಗಬಾರದು ಅಂತ ತಿಳಿದುಕೊಂಡು ಪ್ರಾಥಮಿಕ ಶಾಲೆ ಇರುವಂತಹ ಕಡೆ ಗ್ರಾಜ್ಯುಯೇಟ್ ಟ್ರೈನ್ಡ್, ಟೀಚರ್‌ಗಳನ್ನು ಹೇಗೆ ನಿಯೋಜಿಸುತ್ತಾರೆ; ಹಾಗೆ ಇಲ್ಲಿಯೂ ಸಹಿತ ನಿಯೋಜಿಸಲಾಗಿದೆ. ಗೌರವ ಶಿಕ್ಷಕರನ್ನು ನೇಮಿಸಿಕೊಳ್ಳಲಿಕ್ಕೆ ಅವರಿಗೆ ಒಂದು ಅಜ್ಞೆಯನ್ನು ಸಹಿತ ಕೊಡಲಾಗಿದೆ. ಗೌರವ ಶಿಕ್ಷಕರನ್ನು ನೇಮಿಸಿಕೊಂಡು ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ಅಭ್ಯಾಸವನ್ನು ಮಾಡಿಸಲಾಗುತ್ತಿದೆ. ಇದು ನಿಜ, ಈಗ ಮುಂಬರುವ ದಿನಗಳಲ್ಲಿ ನಾವು ಅಧ್ಯಾಪಕರುಗಳನ್ನು ನೇಮಿಸಿಕೊಳ್ಳುತ್ತಿದ್ದೇವೆ. ಸ್ಪೆಷಲ್ ರಿಕ್ರೂಟ್‌ಮೆಂಟ್‌ನಲ್ಲಿಯೂ ತೆಗೆದುಕೊಳ್ಳುತ್ತಿದ್ದೇವೆ ಮತ್ತು ಜನರಲ್ ರಿಕ್ರೂಟ್‌ಮೆಂಟ್‌ನಲ್ಲಿಯೂ ಸಹಿತ ನಾವು ಅಧ್ಯಾಪಕರುಗಳನ್ನು ನೇಮಿಸಿಕೊಳ್ಳುತ್ತಿದ್ದೇವೆ. ಆ ಸಮಯದಲ್ಲಿ ಈ ಶಾಲೆಗೆ ಅಧ್ಯಾಪಕರನ್ನು ಒದಗಿಸುವಂಥ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಇನ್ನು ಸ್ಕೂಲ್ ಬಿಲ್ಡಿಂಗ್ ಬಗ್ಗೆ ಹೇಳಿದರು; ಇದರ ಬಗ್ಗೆ ನನಗೆ ದೊರೆತ ಮಾಹಿತಿಯ ಪ್ರಕಾರ ಹೈಸ್ಕೂಲ್, ಪ್ರೈಮರಿ ಸ್ಕೂಲ್ ಇವೆಲ್ಲ ಜಿಲ್ಲಾಪರಿಷತ್ತಿಗೆ ಹೋಗಿದ್ದರಿಂದ ಆ ಕಟ್ಟಡ ವಗೈರೆ ಕಟ್ಟಿಸುವಂಥಹದ್ದು ಸಹಿತ ಅವರೇ ಮಾಡುವಂತಹ ಕೆಲಸವಾಗಿದೆ. ನಾವು ಸರ್ಕಾರದಿಂದ ಹಣವನ್ನು ಮಂಜೂರು ಮಾಡಬೇಕಾಗುತ್ತದೆ. ಈಗಾಗಲೇ ಹಣವನ್ನು ಮಂಜೂರು ಮಾಡಿ ಅಲ್ಲಿ ಒಂದು ಕೊಠಡಿಯನ್ನು ಕಟ್ಟಿಸಲಾಗಿದೆ. ಮತ್ತೊಂದು ಕೊಠಡಿಯನ್ನು ಕಟ್ಟಿಸಬೇಕಾಯಿತು. ಅಂದರೆ ಅಲ್ಲಿ ಸ್ವಲ್ಪ ಏನೋ ತೊಂದರೆ ಬಂದಿದ್ದರಿಂದ ಅದನ್ನು ಅಲ್ಲಿಯೇ ನಿಲ್ಲಿಸಲಾಗಿದೆ. ಆ ತೊಂದರೆಯನ್ನು ನಿವಾರಿಸಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಮುಂಬರುವ ದಿನಗಳಲ್ಲಿ ಆ ಕೊಠಡಿಗಳನ್ನು ಕಟ್ಟಿಸಿ ಒಂದು ಶಾಲೆಯನ್ನು ಸರಿಯಾದ ರೀತಿಯಲ್ಲಿ ನಡೆಯುವ ಹಾಗೆ ಎಲ್ಲ ವ್ಯವಸ್ಥೆಯನ್ನೂ ನಾವು ಮಾಡಿಕೊಡುತ್ತೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ:– ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರದ ಕಾನೂನು ಪ್ರಕಾರ ಐದು ಎಕರೆ ಜಾಗಬೇಕು. ಪ್ಲೇಗ್ರೌಂಡ್ ಮತ್ತು ಇತರ ಎಲ್ಲಾ ಚಟುವಟಿಕೆಗಳಿಗೆ ಜಾಗ ಬೇಕು. ನೀವೇ ಒಂದು ಎಕರೆ ಇದೆ ಅಂತ ಹೇಳುತ್ತಿದ್ದೀರಿ. ಅಲ್ಲಿ ಒಂದು ಎಕರೆಯೂ ಇಲ್ಲ. ಸಮೀಪದಲ್ಲಿಯೇ ಸರ್ಕಾರದ ಜಮೀನು ಇದೆ ಅದನ್ನು ತೆಗೆದು ಇನ್ನು ಬೇರೆ ಸ್ಯಾಂಕ್ಷನ್ ಆಗಿ ಬರುವ ಕಟ್ಟಡಗಳನ್ನು ಸಹ ಅಲ್ಲೆ ಕಟ್ಟಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ॥ ಹೆಚ್.ಡಿ. ಲಮಾಣಿ:– ಸಾಮಾನ್ಯವಾಗಿ ಸರ್ಕಾರಿ ಜಮೀನು ಇತ್ತು ಅಂದರೆ ಅಲ್ಲಿಯೇ ಕಟ್ಟಡವನ್ನು ಕಟ್ಟಿಸಲಿಕ್ಕೆ ವ್ಯವಸ್ಥೆಯನ್ನು ಮಾಡಿಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆ

(1826): ಶ್ರೀ ಮನೋಹರ. ಯು. ಐನಾಪುರ (ಬಳ್ಳೊಳ್ಳಿ):–

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಇಂಡಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳು ಎಷ್ಟು;

ಅ) ಒಟ್ಟು ಮಂಜೂರಾದ ಹುದ್ದೆಗಳು ಎಷ್ಟು;

ಇ) ಈ ಹುದ್ದೆಗಳಲ್ಲಿ ಭರ್ತಿ ಮಾಡಿದ ಹುದ್ದೆಗಳು ಎಷ್ಟು ?

ಡಾ।। ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) 89 ಖಾಲಿ ಹುದ್ದೆಗಳು.

ಆ) 915 ಹುದ್ದೆಗಳು.

ಇ) 826 ಹುದ್ದೆಗಳು.

ರಾಯಚೂರು ಜಿಲ್ಲೆಯಲ್ಲಿ ಕಪ್ಪು ಹಲಗೆ ಯೋಜನೆ

(2117): ಶ್ರೀ ಎಂ.ಎಸ್. ಪಾಟೀಲ್ (ರಾಯಚೂರು):–

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಯಚೂರು ಜಿಲ್ಲೆಯಲ್ಲಿ ಕಪ್ಪು ಹಲಗೆ ಕಾರ್ಯಾಚರಣೆಯ 4ನೇ ಹಂತದ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಆಯ್ಕೆಯಾಗಿರುವ ಅಭ್ಯರ್ಥಿಗಳ ಹೆಸರು, ಅವರ ಸ್ವಸ್ಥಳದ ವಿಳಾಸ, ಜಾತಿ, ಮತ್ತು ವಿದ್ಯಾರ್ಹತೆಗಳೇನು; ಅವರಲ್ಲಿ ಮಹಿಳಾ ಅಭ್ಯರ್ಥಿಗಳ ಸಂಖ್ಯೆ ಎಷ್ಟು; ಇವರಲ್ಲಿ ಎಷ್ಟು ಅಭ್ಯರ್ಥಿಗಳು ನೇಮಕಾತಿ ಆದೇಶ ಪಡೆದು ಕೆಲಸಕ್ಕೆ ಹಾಜರಾಗಿರುವರು; ನೇಮಕಾತಿ ಆದೇಶ ಇಂದಿನ ದಿನದವರೆಗೂ ಪಡೆಯದವರ ಸಂಖ್ಯೆ ಎಷ್ಟು; ಈ ವಿಳಂಬಕ್ಕೆ ಕಾರಣಗಳೇನು; (ವಿವರ ನೀಡುವುದು)

ಆ) ಕೊಪ್ಪಳ, ಯಲಬುರ್ಗಾ, ಕುಷ್ಟಗಿ ಮತ್ತು ರಾಯಚೂರು ತಾಲ್ಲೂಕಿನ ಆಯ್ಕೆಗೊಂಡಿರುವ ಶಿಕ್ಷಕರ ನೇಮಕಾತಿ ಆದೇಶ ನೀಡಲಾಗಿರುವ ಏಕೋಪಾಧ್ಯಾಯ ಶಾಲೆಗಳಾವುವು. ಅವರಲ್ಲಿ ಯಾವ ಯಾವ ಶಿಕ್ಷಕರನ್ನು ನಂತರ ಅದೇ ತಾಲ್ಲೂಕಿನ ಯಾವ ಯಾವ ಶಾಲೆಗಳಿಗೆ ಯರವಲು ಸೇವೆಯ ಮೇಲೆ ಕಾರ್ಯನಿರ್ವಹಿಸಲು ಆದೇಶಿಸಲಾಗಿದೆ (ಪ್ರತಿ ತಾಲ್ಲೂಕಿನ ಈ ಶಿಕ್ಷಕರ ಸಂಬಂಧ'ದ ಪಟ್ಟಿ ಲಗತ್ತಿಸುವುದು);

ಇ) ಕಪ್ಪು ಹಲಗೆ ಕಾರ್ಯಾಚರಣೆ ಯೋಜನೆಯ ಅಡಿಯಲ್ಲಿ ಆಯ್ಕೆಗೊಂಡಿರುವ ಶಿಕ್ಷಕರಿಗೆ ಏಕೋಪಾಧ್ಯಾಯ ಅಲ್ಲದ ಶಾಲೆಗೆ ನೇರವಾಗಿ ನೇಮಕಾತಿ ಆದೇಶ ನೀಡಬಹುದೆ; ಹಾಗಿದ್ದರೆ, ಇದು ನೇಮಕಾತಿ ನಿಯಮಾವಳಿ ಉಲ್ಲಂಘನೆ ಮಾಡಿದಂತಲ್ಲವೇ ಸರ್ಕಾರದವರ ಕ್ರಮವೇನು ?

ಡಾ।। ಹೆಚ್.ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):–

ಅ) ರಾಯಚೂರು ಜಿಲ್ಲೆಯಲ್ಲಿ ಕಪ್ಪುಹಲಗೆ ಕಾರ್ಯಾಚರಣೆಯ 4ನೇ ಹಂತದಡಿಯಲ್ಲಿ 290 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಇವರ ಪೈಕಿ 270 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದ್ದು, ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಇವರಲ್ಲಿ 64 ಮಹಿಳಾ ಅಭ್ಯರ್ಥಿಗಳಿದ್ದಾರೆ. ನೇಮಕಾತಿ ಆದೇಶ ಪಡೆಯದವರ ಸಂಖ್ಯೆ 20. ಈ 20 ಅಭ್ಯರ್ಥಿಗಳ ಪೈಕಿ 11 ಅಭ್ಯರ್ಥಿಗಳ ಆದಾಯ ಮತ್ತು ಜಾತಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳು ವ್ಯತಿರಿಕ್ತವಾಗಿರುವುದರಿಂದ ಇತ್ಯರ್ಥಕ್ಕಾಗಿ ಆ ಪ್ರಕರಣಕ್ಕಾಗಿ ಪತ್ರ ವ್ಯವಹಾರ ನಡೆದಿದೆ. 7 ಅಭ್ಯರ್ಥಿಗಳು ಗೈರು ಹಾಜರಾಗಿರುತ್ತಾರೆ. 1 ಅಭ್ಯರ್ಥಿಯ ಆದಾಯವು ಆ ಗುಂಪಿಗೆ ನಿಗದಿ ಪಡಿಸಿದ ಮಿತಿಗಿಂತ ಹೆಚ್ಚಾಗಿದ್ದುದನ್ನು ಪರಿಶೀಲಿಸಿ ತಹಶೀಲ್ದಾರರು ಪ್ರಮಾಣ ಪತ್ರ ನೀಡಿರುವುದರಿಂದ ಹಾಗೂ 1 ಅಭ್ಯರ್ಥಿಯು ಎರಡು ಜಿಲ್ಲೆಯಲ್ಲಿ ಹೆಸರು ನೊಂದಾಯಿಸಿ ಎರಡು ಜಿಲ್ಲೆಯಲ್ಲಿಯೂ ಆಯ್ಕೆಯಾಗಿದ್ದರಿಂದ ವಿಳಂಬವಾಗಿರುತ್ತದೆ.